ಎಂದು ಕೆತ್ತಿಸಿ ಹಾಕಿದ ಕಲ್ಲು ಇದೆಯಂತೆ. ಅದನ್ನು ತೆಗೆಯಲು ಸಾಧ್ಯವಿಲ್ಲವಂತೆ. ಒಂದು ವೇಳೆ ಆ ಕಲ್ಲನ್ನು ಸ್ಥಾನಪಲ್ಲಟಗೊಳಿಸಲು ಯತ್ನಿಸಿದರೆ ಇಡೀ ಸೇತುವೆಯೇ 'ಢಮಾರ್' ಆಗುತ್ತದಂತೆ. ಬ್ರಿಟಿಷರು ತಮ್ಮ ದೇಶದಲ್ಲಿರುವ ಇಂಡಿಯಾದ ಆ ಕಲ್ಲನ್ನು ತೆಗೆಯಲು ಯೋಚಿಸಿ ಯೋಚಿಸಿ ಸುಸ್ತಾಗಿ ಬಿಟ್ಟಿದ್ದಾರೆ. ಬ್ರಿಟಿಷರು ತಮ್ಮ ವ್ಯಾಪಾರಿ ಬುರುಡೆಯ ಶಕ್ತಿಯಿಂದ ನಮ್ಮನ್ನು ಇನ್ನೂರು ವರ್ಷ ಆಳಿರಬಹುದು. ನಮ್ಮ ವಿಶ್ವೇಶ್ವರಯ್ಯನವರು ಹಾಕಿದ ಒಂದು ನಿರ್ಜೀವ ಕಲ್ಲು, ಸೂರ್ಯ ಮುಳುಗದ ಸಾಮ್ರಾಜ್ಯವೆಂದು ಖ್ಯಾತಿಗಳಿಸಿದ ಬ್ರಿಟಿಷರನ್ನೇ ಆಳುತ್ತಿರುವುದು ಸೋಜಿಗವಲ್ಲವೆ?! ಕಳೆದ ಎರಡು ವರ್ಷಗಳ ಹಿಂದೆ ವಿಶ್ವ ಕವಿ ವಿಲಿಯಂ ಶೇಕ್ಸ್‌ಪಿಯರನ 400ನೇ ಪುಣ್ಯಸ್ಮರಣೆ ಸಂದರ್ಭದಲ್ಲಿ ಬ್ರಿಟನ್‌ನ 'ಆರ್ಗೋಸಿ' ನಿಯತಕಾಲಿಕೆಯೊಂದು ಲೇಖನ ಪ್ರಕಟಿಸಿತ್ತು. ಅತ್ಯಂತ ಶ್ರೇಷ್ಠಮಟ್ಟದ ರಾಡಾರ್ ಸ್ಕಾನಿಂಗ್ ಮೂಲಕ ಶೇಕ್ಸ್‌ಪಿಯರ್‌ನನ್ನು ಹೂಳಿದ್ದ ಸಮಾಧಿಯ ಒಳಭಾಗದಲ್ಲಿ ತನಿಖೆ ಮಾಡಿದಾಗ ಅಲ್ಲಿ ಅವನ ತಲೆಬುರುಡೆ ನಾಪತ್ತೆಯಾಗಿದ್ದು ಕಂಡುಬಂದಿತೆಂಬ ಸುದ್ದಿ ತಲ್ಲಣ ಸೃಷ್ಟಿಸಿತ್ತು. ಸ್ಟ್ರಾಟ್‌ಫೊರ್ಡ್‌ನ ಹೋಲಿ ಟ್ರೇನಿಟಿ ಚರ್ಚಿನ ಬಳಿಯಲ್ಲಿರುವ ಸಮಾಧಿಯಿಂದ 1794ರಲ್ಲೇ ಶೇಕ್ಸ್‌ಪಿಯರ್‌ನ ತಲೆಬುರುಡೆ ಕದ್ದೊಯ್ದಿದ್ದಾರೆ ಎಂಬ ವರದಿಯನ್ನು ಪ್ರಕಟಸಲಾಗಿತ್ತು. ಮೇಧಾವಿಗಳ ತಲೆಬುರುಡೆ ಸತ್ತ ಬಳಿಕವೂ ಬೆಲೆಬಾಳುವುದರಿಂದಲೇ ನಮ್ಮ ವಿಶ್ವೇಶ್ವರಯ್ಯನವರ ತಲೆಬುರುಡೆಯನ್ನು ಕೊಂಡುಕೊಳ್ಳಲು ಸಿದ್ಧರಿದ್ದ ಆಂಗ್ಲರಿಗೆ ಭಾರತೀಯ ಬುರುಡೆಗಳು ಸೊಪ್ಪು ಹಾಕಲಿಲ್ಲವೆಂಬುದು ಸಮಾಧಾನದ ಸಂಗತಿ. ಬ್ರಹ್ಮಾಂಡದ ರಹಸ್ಯವನ್ನೆಲ್ಲ ಬಯಲಿಗೆಳೆದದ್ದು, ಆಳ ಸಾಗರಗಳ ತಳವನ್ನೆಲ್ಲ ಜಾಲಾಡಿದ್ದು, ಜೀವಿಯ ಪ್ರತಿ ಅಂಗದ ರಚನೆಯನ್ನು ತೆರೆದು ತೋರಿಸಿದ್ದು, ಕೋಟಿ ಕೋಟಿ ದೂರದಾಚೆಗೆ ಪ್ರಯಾಣ ಹೊರಟಿದ್ದು ಬುರುಡೆ ತನ್ನ ಒಡಲಲ್ಲಿ ಬಚ್ಚಿಟ್ಟುಕೊಂಡ ಅಗಾಧ ಶಕ್ತಿಯಿಂದಲೇ! ಅದರಂತೆ ಕೆಲವೇ ನಿಮಿಷಗಳಲ್ಲಿ ಇಡೀ ಭೂಮಂಡಲವನ್ನೇ ಸುಟ್ಟು ಬೂದಿ ಮಾಡುವಂಥ ಅಪಾಯಕಾರಿ ಬಾಂಬುಗಳನ್ನು ಆವಿಷ್ಕಾರ ಮಾಡಿದ್ದು ಬುರುಡೆಗಳ ಕರಾಮತ್ತಿನಿಂದಲೇ! ಮಾನವನ ಬುರುಡೆಯಲ್ಲಿನ ಒಟ್ಟು ಸಾಮರ್ಥ್ಯದ ಶೇಕಡಾ ಹತ್ತರಷ್ಟು ಭಾಗವನ್ನು ಬಳಸಲಾಗುತ್ತದೆಯಂತೆ. ಉಳಿದ ತೊಂಬತ್ತರಷ್ಟು ಬುರುಡೆಯಲ್ಲಿನ ಸಾಮರ್ಥ್ಯ ಸದ್ವಿನಿಯೋಗವಾದರೆ ಸಮಸ್ತ ಜೀವಕೋಟಿಯ ಹಿತಕ್ಕೆ ದಾರಿಯಾಗಬಲ್ಲದು. ಹೀಗೆ ಕಲ್ಪನೆ, ಸತ್ಯ, ಅಸತ್ಯ, ಆರೋಪ ಪ್ರತ್ಯಾರೋಪಗಳನ್ನು ಮಾಡುವ, ತಿರಸ್ಕರಿಸುವ, ವೈಚಾರಿಕತೆಯನ್ನು ಜಾಲಾಡಿಸುವ ಬುರುಡೆಯ ಕುರಿತಾದ ಬರಹವನ್ನು ನಾನು 'ಬುರುಡಾಲಾಜಿ' ಎಂದು ಕರೆದಿದ್ದುದು ನಿಮಗೂ ಒಪ್ಪಿಗೆಯಾಗಿರಬಹುದಲ್ಲ!? ನನ್ನ ಬುರುಡೆಗೆ ಹೊಳೆದಷ್ಟು ನಾನು ಬರೆದಿದ್ದೇನೆ. ಇದರಾಚೆಗೂ ವಿಷಯವಿದ್ದರೆ ಅದನ್ನು ಗ್ರಹಿಸುವ ನಿಮ್ಮ ಬುರುಡೆಗೆ 'ಜೈ' ಎನ್ನುವೆ!

### ಎಸ್.ಆರ್. ರಾವಳ

ಮೂಲತಃ ವಿಜಯಪುರ ಜಿಲ್ಲೆಯ ಅಥರ್ಗಾದವರು. 'ಸುಧಾ–ಮಯೂರ'ಗಳಲ್ಲಿ ಅವರ ಬರಹಗಳು ಪ್ರಕಟವಾಗಿವೆ. 'ಢಗಳ ಅಂಗ್ಯಾಗ', 'ಒಡಲ ಕುದಿತದ ಕಾಳು' ಎಂಬ ಕವನ ಸಂಕಲನಗಳನ್ನು, 'ಹೊನ್ನ ಗಿಂಡಿ', 'ಮಂದಾರ ಮಾಲೆ', 'ಅರಿವಿನ ಮನೆಯ ಆರದ ದೀಪಗಳು' ಎಂಬ ವಿಮರ್ಶಾ ಕೃತಿಗಳನ್ನು, 'ಇಂಗು ತಿಂದ ಮಂಗ', 'ಶಿವ ಸನ್ನಿಧಿ' ಎಂಬ ನಾಟಕಗಳನ್ನು ಪ್ರಕಟಿಸಿದ್ದಾರೆ. 'ಗುಡುಸಾಬನೂ... ಗೂಡಂಗಡಿಯೂ...' ಅವರ ಕಥಾಸಂಕಲನ. ಪ್ರಸ್ತುತ ಬಾಗಲಕೋಟೆ ಜಿಲ್ಲೆಯ ತೇರದಾಳದಲ್ಲಿ ನೆಲೆಸಿದ್ದಾರೆ.